RNU AIR DHARWAD

MAY 28, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಬಕ್ರೀದ್ ಹಬ್ಬದ ಆಚರಣೆ ಹಿನ್ನೆಲೆ,** ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ ಹಾಗೂ ಗದಗ ಸೇರಿದಂತೆ, ನಾಡಿನ ವಿವಿಧೆಡೆ, ಈದ್ಗಾ ಮೈದಾನಗಳಲ್ಲಿ, ಮುಸ್ಲಿಂ ಬಾಂಧವರು, ಇಂದು ಬೆಳಗ್ಗೆ 7 ರಿಂದ, ಮಧ್ಯಾಹ್ನ 12 ಗಂಟೆಯ ವರೆಗೆ, ಸಾಮೂಹಿಕ ಪ್ರಾರ್ಥನೆ ಹಾಗೂ ಶುಭಾಶಯ ವಿನಿಮಯ, ಕೈಗೊಂಡರು.

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು** ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಸ್ಲಿಂ ಬಾಂಧವರಿಗೆ, ಬಕ್ರೀದ್ ಹಬ್ಬದ ಶುಭಾಶಯ ಕೋರಿದ್ದಾರೆ.

<><><>

**ಬಕ್ರೀದ್ ಹಬ್ಬದ ಹಿನ್ನೆಲೆ,** ಬೆಳಗಾವಿ ನಗರದ ಈದ್ಗಾ ಮೈದಾನದಲ್ಲಿ, ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ, ಮುಸ್ಲಿಂ ಸಮಾಜದ ಹಿರಿಯ ಮುಖಂಡ, ಮೆಹಬೂಬ್ ಮಕಾನದಾರ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಮೆಹೆಬೂಬ್ ಮಕಾನದಾರ ಧ್ವನಿ 45 ಸೆಕೆಂದುಗಳು**

<><><>

**ದೇಶದ ಸ್ವಾತಂತ್ರ್ಯಕ್ಕಾಗಿ,** ಸೂರ್ಯನ ಕಿರಣಗಳೇ ಬೀಳದ, ಕತ್ತಲ ಕೋಣೆಯೊಳಗೆ ಬಂಧಿಯಾಗಿ, ಅಂಡಮಾನ್ ದ್ವೀಪದ, ಪೋರ್ಟ್‌ಬ್ಲೇರ್‌ನ ಸೆಲ್ಯುಲರ್ ಜೈಲಿನಲ್ಲಿ, ಕರಿ ನೀರಿನ ಶಿಕ್ಷೆ ಅನುಭವಿಸಿದ, ಸ್ವಾತಂತ್ರ್ಯವೀರ, ಶ್ರೀ ವಿನಾಯಕ ದಾಮೋದರ ಸಾವರ್ಕರ ಅವರ, ಜಯಂತ್ಯುತ್ಸವ ಇಂದು. ಅಖಂಡ ಭಾರತದ ನಿರ್ಮಾಣಕ್ಕಾಗಿ ಹೋರಾಡಿದ ದೇಶಪ್ರೇಮಿಯ, ಜಯಂತಿಯಂದು, ಶತಕೋಟಿ ಪ್ರಣಾಮಗಳು ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ, ಅನೇಕ ಗಣ್ಯರು, ಶ್ರದ್ಧಾ ಸುಮನ ಸಮರ್ಪಿಸಿದ್ದಾರೆ.

<><><>

**ಇಂದು, ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ.** ಮಹಿಳೆಯರ ಆರೋಗ್ಯ ಮತ್ತು ಸ್ವಾಸ್ಥ್ಯದ ದೃಷ್ಟಿಯಿಂದ, 2014 ರಲ್ಲಿ ಪ್ರಥಮ ಬಾರಿಗೆ, ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆಗೆ, ಒತ್ತು ನೀಡಲಾಯಿತು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಮಹಿಳೆಯರು, ಋತುಚಕ್ರದ ಅವಧಿಯಲ್ಲಿ, ಸುರಕ್ಷಿತ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು, ಹರಸಾಹಸ ಪಡುತ್ತಿದ್ದಾರೆ. ಈ ಬಗ್ಗೆ ಜನ ಜಾಗೃತಿ ಮೂಡಿಸುವ, ಅವಶ್ಯಕತೆ ಇದೆ ಎನ್ನುತ್ತವೆ, ಸಮೀಕ್ಷೆ ವರದಿಗಳು.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ನವನಗರದ,** ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಟ್ರಿಪ್ಲ್ ಐ.ಟಿ. ಎಂಟನೇ ಘಟಿಕೋತ್ಸವ, ನಾಡಿದ್ದು 30 ರಂದು, ನಡೆಯಲಿದೆ. ಟ್ರಿಪ್ಲ್ ಐ.ಟಿ. ನಿರ್ದೇಶಕ, ಪ್ರೊಫೆಸರ್ ಎಸ್.ಆರ್. ಮಹದೇವಪ್ರಸನ್ನ ಮಾಹಿತಿ ನೀಡಿ, ಹೊಸ ದಿಲ್ಲಿ, ಭಾರತೀಯ ತಂತ್ರಜ್ಞಾನ ಸಂಸ್ಥೆ, ಐ.ಐ.ಟಿ. ನಿರ್ದೇಶಕ, ಪ್ರೊಫೆಸರ್ ರಂಗನ್ ಬ್ಯಾನರ್ಜಿ ಘಟಿಕೋತ್ಸವ ಭಾಷಣ ಮಾಡಲಿದ್ದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಟ್ರಿಪ್ಲ್ ಐ.ಟಿ. ಆಡಳಿತ ಮಂಡಳಿ ಅಧ್ಯಕ್ಷ, ಜಲಜ ದಾನಿ ಅಧ್ಯಕ್ಷತೆ ವಹಿಸುವರು, ಎಂದರು.

<><><>

ಎಂ.ಟೆಕ್ – ಸಂಶೋಧನೆ ವಿಭಾಗದಿಂದ, ಇಬ್ಬರು, ಬಿ.ಟೆಕ್. ಕಾಂಪ್ಯುಟರ್ ಸೈನ್ಸ್ – 136, ಡೇಟಾ ಎ.ಐ. – 66 ಹಾಗೂ ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ – 51 ಜನ ಯುವ ಪದವೀಧರರು, ಪದವಿ ಪಡೆಯಲಿದ್ದಾರೆ. ರಾಷ್ಟ್ರಪತಿ ಪದಕ, ನಿರ್ದೇಶಕರ ಪದಕ ಹಾಗೂ ಸಂಸ್ಥೆ ಪದಕ ಸಹಿತ, ಒಟ್ಟು ಆರು ಪದಕಗಳನ್ನು ನೀಡಲಾಗುವುದು ಎಂದು, ಪ್ರೊಫೆಸರ್ ಮಹದೇವಪ್ರಸನ್ನ ತಿಳಿಸಿದರು.

<><><>

**ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ,** ಆರ್.ಟಿ.ಇ. ಅಡಿ, 2026–27ನೇ ಸಾಲಿಗೆ, ಖಾಸಗಿ, ಅನುದಾನಿತ, ಹಾಗೂ ಅನುದಾನ ರಹಿತ ಶಾಲೆಗಳಲ್ಲಿ, ಉಚಿತ ಪ್ರವೇಶಕ್ಕಾಗಿ, ಅರ್ಹ ಅರ್ಜಿಗಳನ್ನು, ಮೊದಲ ಸುತ್ತಿನ ಲಾಟರಿ ಮೂಲಕ, ಆಯ್ಕೆ ಮಾಡಲಾಗಿದೆ ಎಂದು, ಶಿಕ್ಷಣ ಇಲಾಖೆ, ತಿಳಿಸಿದೆ. ಮಕ್ಕಳ ಪಾಲಕರಿಗೆ, ಎಸ್‌ಎಮ್‌ಎಸ್ ಮೂಲಕ, ಮಾಹಿತಿ ರವಾನೆಯಾಗಿದೆ.

<><><>

**ಶೀಘ್ರದಲ್ಲೇ ರಾಜ್ಯದಲ್ಲಿ, ಮತದಾರರ ಪಟ್ಟಿಯ** ಸಮಗ್ರ ಪರಿಷ್ಕರಣೆ – ಎಸ್.ಐ.ಆರ್. ಪ್ರಕ್ರಿಯೆ ಆರಂಭವಾಗಲಿದ್ದು, ವಾರ್ಡ್ ಅಧ್ಯಕ್ಷರು ಹಾಗೂ ಬಿಜೆಪಿ ಪಕ್ಷದ ಕಾರ್ಯಕರ್ತರು, ಸಕ್ರಿಯವಾಗಿ ಭಾಗವಹಿಸುವಂತೆ, ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಶಾಸಕ, ಮಹೇಶ ಟೆಂಗಿನಕಾಯಿ ಮನವಿ ಮಾಡಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಅರವಿಂದನಗರದ, ಬಿಜೆಪಿ ಕಚೇರಿಯಲ್ಲಿ ನಡೆದ, ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ, ಸಂಘಟನಾತ್ಮಕ ಸಭೆಯಲ್ಲಿ, ಅವರು ಮಾತನಾಡಿದರು.

<><><>

**'ದೋ ಬೂಂದ್ ಜಿಂದಗೀ..ಕೇ'** ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ, ಇಂದು, 28ನೇ ತಾರೀಖು, ರಾಜ್ಯಾದ್ಯಂತ ಜರುಗಲಿದೆ.

<><><>

**ಕಲ್ಯಾಣ ಕರ್ನಾಟಕದ ಬಹುತೇಕ ಕಡೆ,** ರೋಹಿಣಿ ಮಳೆ ಆರ್ಭಟ ಜೋರಾಗಿತ್ತು. ಈ ಮಧ್ಯೆ, ರಾಜ್ಯದ ವಿವಿಧೆಡೆ ಮೂವರು, ಸಿಡಿಲಿಗೆ ಬಲಿಯಾಗಿದ್ದಾರೆ. ಕಲಬುರಗಿ ಜಿಲ್ಲೆ, ಸೇಡಂ ಹಾಗೂ ಚಿಂಚೋಳಿ ತಾಲೂಕುಗಳಲ್ಲಿ, ಯಾದಗಿರಿ, ಬೀದರ, ರಾಯಚೂರು, ಕೊಪ್ಪಳ ಹಾಗೂ ಕುಷ್ಟಗಿ ತಾಲೂಕಿನಲ್ಲಿ, ವ್ಯಾಪಕ ಮಳೆಯಾಗಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಜನಪ್ರಿಯ, 'ಮನ್ ಕಿ ಬಾತ್'ನ 134ನೇ ಆವೃತ್ತಿ, ಈ ತಿಂಗಳ 31 ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ನಾಗರಿಕರು ತಮ್ಮ ಅಭಿಪ್ರಾಯಗಳನ್ನು, ನಾಳೆ, ಶುಕ್ರವಾರ 29ರೊಳಗೆ My Gov.in ಜಾಲತಾಣ ಅಥವಾ 1800–11–7800 ಸಂಖ್ಯೆಗೆ ಕರೆ ಮಾಡಿ, ಹಂಚಿಕೊಳ್ಳಬಹುದು.

**<><><>**

**ಇಲ್ಲಿಗೆ, ಪ್ರದೇಶ ಸಮಾಚಾರ, ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**